





ಮೂಲ: **ಖಲೀಲ್ ಗಿಬ್ರಾನ್**
ಕನ್ನಡಕ್ಕೆ: **ಪದ್ಮರಾಜ ದಂಡಾವತಿ**

ಕಲೆ: ರೂಪಶ್ರೀ ಕಲ್ಲಿಗನೂರು

# ಭಯ

ಸಾಗರವ ಸೇರುವ ಮುನ್ನ
ಹೊಳೆ ಕ್ಷಣ
ಅಳುಕಿ ನಡುಗುತ್ತದೆಯಂತೆ

ಒಮ್ಮೆ ತಿರುಗಿ ನೋಡುತ್ತಾಳೆ
ನಡೆದು ಬಂದ ದಾರಿಯನು
ಗುಡ್ಡಗಳು, ಬೆಟ್ಟಗಳು ಸುತ್ತು
ಬಳಸು ದಾರಿ ಕಾಡು ಮೇಡು
ಹಳ್ಳಿಗಾಡು

ಅವಳ ಮುಂದೆ ತೋಳು
ತೆರೆದು ನಿಂತ ಅಂಭೋಧಿ
ತೆಕ್ಕೆಗೆ ಬಿದ್ದರೆ ಕರಗಿ
ಹೋದಂತೆಯೇ ಕರ್ಪೂರದ ಹಾಗೆ

ಬೇರೆ ದಾರಿ ಏನಿದೆ?
ತಿರುಗಿ ಹೋಗಲಾರಳು

ಯಾರೂ ಹೋಗಲಾರರು
ಬದುಕಿನಲಿ ಬಂದ ದಾರಿಯಲಿ...
ಹೋದವರು ಉಂಟೇ?

ಸಾಗರಕೆ ಧುಮುಕುವ ಭಯ
ನೀಗಲೇ ಬೇಕು
ಇಲ್ಲವಾದೇನು ಎಂಬ ಅಳುಕು
ಮಾಯವಾಗುವುದು ಆಗ

ಆಲಿಂಗನದಲಿ ಹೊಕ್ಕಾಗಲೇ
ಕರಗಲಿಲ್ಲ ತಾನು
ಸಾಗರವಾದೆ ಎಂದು
ಅರ್ಥವಾಯಿತು ನದಿಗೆ

